


# ಸಂಯಮಿ ಬವುಮಾ

ಬರೀ 62 ಇಂಚಿನ ವಾಮನಮೂರ್ತಿ ಬವುಮಾ ಆಕರ್ಷಕ ಕ್ರಿಕೆಟರ್ ಅಲ್ಲ. ಆದರೆ, ಸಂಯಮದಲ್ಲಿ ನ್ಯೂಜಿಲೆಂಡ್‌ನ ಕೇನ್ ವಿಲಿಯಮ್ಸನ್ ತಮ್ಮನಂತೆ ಕಾಣುತ್ತಾರೆ.

■ ವಿಶಾಖ ಎನ್.

ಬವುಮಾ ಈಗ ದಕ್ಷಿಣ ಆಫ್ರಿಕಾ ಕ್ರಿಕೆಟ್ ತಂಡದ ಏಕದಿನ ಪಂದ್ಯಗಳಿಗೆ ನಾಯಕ. ಸ್ವತಃ ಕೇವಲ 16 ಪಂದ್ಯಗಳಷ್ಟೇ ಆಡಿರುವ ಅನುಭವಿ. ಟೆಸ್ಟ್ ಕ್ರಿಕೆಟ್‌ನಲ್ಲಿ ಮೊದಲ ಶತಕ ಗಳಿಸಲು ಅವರು 44 ಪಂದ್ಯಗಳವರೆಗೆ ಕಾಯ್ದರು. ಸಂಯಮದಲ್ಲಿ ಅದ್ದಿ ತೆಗೆದಂತಹ ವ್ಯಕ್ತಿತ್ವದ ಅವರು ನಾಯಕಗಾರಬೇಕು ಎಂದು ಸೂಚಿಸಿದ್ದು ಗ್ರೇಮ್ ಸ್ಮಿತ್. ದಕ್ಷಿಣ ಆಫ್ರಿಕಾ ಪರವಾಗಿ ಅತಿ ಹೆಚ್ಚು ಕಾಲ ನಾಯಕನಾಗಿ ಜವಾಬ್ದಾರಿ ನಿರ್ವಹಿಸಿದ ಸ್ಮಿತ್, ಈ ಸಂದರ್ಭದಲ್ಲಿ ಬವುಮಾ ನಾಯಕತ್ವವನ್ನು ನೆಚ್ಚಿಕೊಳ್ಳಲು ಕಾರಣವಿದೆ. ದಕ್ಷಿಣ ಆಫ್ರಿಕಾದ ಲಯನ್ಸ್ ತಂಡದ ಪರವಾಗಿ ಬವುಮಾ ಆಡುತ್ತಿದ್ದಾಗ ಅವರ ಕಾರ್ಯವೈಖರಿಯನ್ನು ಸ್ಮಿತ್ ಗಮನಿಸಿದ್ದಾರೆ. ತಂಡದ ಆಟಗಾರರ ಒಳಗೆ ಈಗ ಬೇಗುದಿ ಇದೆ. ವರ್ಣಭೇದ ನೀತಿಯನ್ನು ಮೀರುವ ಕಷ್ಟಗಳನ್ನು ದಕ್ಷಿಣ ಆಫ್ರಿಕಾದ ಸಮಾಜ ಈಗಲೂ ಹೇಗೆ ಎದುರಿಸುತ್ತಿದೆಯೋ, ಕ್ರಿಕೆಟ್ ಡ್ರೆಸಿಂಗ್ ರೂಮ್ ಕೂಡ ಆ ವಾತಾವರಣಕ್ಕೆ ಹೊರತಾಗಿಲ್ಲ. ತಂಡದ ಕೋಚ್ ಮಾರ್ಕ್ ಬೌಚರ್ ಈ ವಿಷಯದಲ್ಲಿ ಸರಿಯಾಗಿ ಕೆಲಸ ಮಾಡಿಲ್ಲ ಎಂದು ದಕ್ಷಿಣ ಆಫ್ರಿಕಾ ಕ್ರಿಕೆಟ್ ಮಂಡಳಿ ಇತ್ತೀಚೆಗಷ್ಟೆ ನೋಟಿಸ್ ಕೊಟ್ಟಿದೆ. ಅದರ ವಿಚಾರಣೆ ನಡೆಯಬೇಕಾದ ಸಂದರ್ಭದಲ್ಲಿ ಬವುಮಾ ನಾಯಕತ್ವ ಮುನ್ನೆಲೆಗೆ ಬಂದಿರುವುದು ಸಹಜವೇ.

ಭಾರತ ಕ್ರಿಕೆಟ್ ತಂಡ ಅನುಭವದ ಮೂಟೆ. ಕೆ.ಎಲ್. ರಾಹುಲ್, ಶಿಖರ್ ಧವನ್, ವಿರಾಟ್ ಕೊಹ್ಲಿ ತರಹದ ಘಟಾನುಘಟಿಗಳು ಒಂದು ಕಡೆ. ರಿಷಭ್ ಪಂತ್ ತರಹದ ದಾಳಿಕೋರ ಇನ್ನೊಂದು ಕಡೆ. ಬುಡ ಅಲ್ಲಾಡಿಸುವಂತೆ ಯಾರ್ಕರ್‌ಗಳನ್ನು ಹಾಕಬಲ್ಲ ಜಸ್‌ಪ್ರೀತ್ ಬುಮ್ರಾ ಮತ್ತೊಂದು ಕಡೆ. ಇವರೆಲ್ಲರ ಎದುರು ಏಕದಿನ ಕ್ರಿಕೆಟ್ ಸರಣಿಯನ್ನು ವೈಟ್‌ವಾಷ್ ಮಾಡುವುದು ತಮಾಷೆಯಲ್ಲ. ಮೊದಲ ಏಕದಿನ ಪಂದ್ಯವನ್ನು ಭಾರತ 31 ರನ್‌ಗಳಿಂದ ಸೋತಿತು. ಎರಡನೇ ಪಂದ್ಯದಲ್ಲಿ ರಿಷಭ್ ಪಂತ್ ದಾಳಿಕೋರತನ ಫಲ ಕೊಡುತ್ತಿದೆ ಎಂದುಕೊಳ್ಳುವಷ್ಟರಲ್ಲಿ ಅವರನ್ನು ಶಂಸಿ ಸ್ಪಿನ್ ಬಲೆಗೆ ಕೆಡಹುವಂತೆ ಮಾಡಲು ಬವುಮಾ ತಂತ್ರ ರೂಪಿಸಿದರು. ಆಮೇಲಿನದ್ದು ಅವರ ಆತ್ಮವಿಶ್ವಾಸದ ನಾಯಕತ್ವ. ಕೊನೆಯ ಪಂದ್ಯದಲ್ಲಿ ಭಾರತದ ಬಾಲಂಗೋಚಿಗಳು ವಿಜಯಲಕ್ಷ್ಮಿಯನ್ನು ಹಿಡಿದು ಜಗ್ಗಾಡಿದರಾದರೂ ಕಿತ್ತುಕೊಂಡದ್ದು ಬವುಮಾ ಸಂಯಮವೇ.

ಬವುಮಾ ಈ ಸರಣಿಯಲ್ಲಿ ಬರೆದ ಮುನ್ನುಡಿಯನ್ನು ಆಸಕ್ತಿಯಿಂದ ಗಮನಿಸೋಣ. ಪಾರ್ಲ್‌ನಲ್ಲಿ ನಡೆದ ಮೊದಲ ಏಕದಿನ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ 68 ರನ್‌ಗಳಾಗುವಷ್ಟರಲ್ಲಿ ಮೂರು ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿತ್ತು. ಆಗ ಬವುಮಾ ಅವುಡುಗಚ್ಚಿ ನಿಂತರು. ರವಿಚಂದ್ರನ್ ಅಶ್ವಿನ್ ವೈವಿಧ್ಯಗಳೆಲ್ಲಕ್ಕೂ ಬವುಮಾ ಬ್ಯಾಕ್‌ಫುಟ್ ಆಟದಲ್ಲಿ ಉತ್ತರವಿತ್ತು. 200 ನಿಮಿಷ ಬವುಮಾ ತಣ್ಣಗೆ ಲಂಗರು ಹಾಕಿ ನಿಂತರು. ಇನ್ನೊಂದೆಡೆ ವ್ಯಾನ್ ಡರ್ ಡ್ಯುಸೆನ್ ದಾಳಿಕೋರ ಆಟವನ್ನಾಡಿದರು. ಅವರ ಹೊಡೆತದ ವೇಗಕ್ಕೆ ಬವುಮಾ ತಾಳ್ಮೆಯ ಇಂಧನ. 147 ಎಸೆತಗಳ ಬವುಮಾ ಇನಿಂಗ್ಸ್‌ನಲ್ಲಿ ಇದ್ದದ್ದು ಬರೀ 8 ಬೌಂಡರಿ.

ಬವುಮಾ ಬ್ಯಾಟಿಂಗ್‌ನಲ್ಲಿ ಅಷ್ಟೇ ಅಲ್ಲ, ನಾಯಕತ್ವದಲ್ಲೂ ತಾಳ್ಮೆಯೇ ಮಂತ್ರ. ಶಂಸಿ ಎಸೆತವೊಂದನ್ನು ರಿಷಭ್ ಪಂತ್ ಎರಡನೇ ಪಂದ್ಯದಲ್ಲಿ ಸಿಕ್ಸರ್‌ಗೆ ಅಟ್ಟಿದ್ದರು. ಮಿಡ್‌ವಿಕೆಟ್ ಪ್ರದೇಶವನ್ನೇ ಗುರಿಯಾಗಿಸಿಕೊಂಡು ಪಂತ್ ಹಳೆಯ ಲಯದಲ್ಲಿ ಆಡುತ್ತಿದ್ದರು. ಅದನ್ನೇ ಪ್ರತಿತಂತ್ರವನ್ನಾಗಿಸಿ ಬವುಮಾ, ಶಂಸಿಯನ್ನು ಬಳಸಿಕೊಂಡರು. ಲೆಂಗ್ತ್‌ನಲ್ಲಿ ಶಂಸಿ ಮಾಡಿದ ಸಣ್ಣ ಮಾರ್ಪಾಡು ಪಂತ್ ವಿಕೆಟ್ ಒಪ್ಪಿಸಲು ಕಾರಣವಾಯಿತು. ಶಂಸಿ, ಮಹಾರಾಜಾ ಇಬ್ಬರ ಸ್ಪಿನ್ ಬಲೆ ಒಂದು ಕಡೆ. ಲುಂಗಿ ಗಿಡಿ, ಸಿಸಾಂಡಾ ಮಗಾಲ, ಫೆಹ್‌ಲುಕ್‌ವಾಯೊ ತರಹದ ವೇಗ ವೈವಿಧ್ಯದ ಕಪ್ಪು ವರ್ಣದ ಪ್ರತಿಭೆಗಳ ಮೇಲಿನ ನೆಚ್ಚುಗೆ ಇನ್ನೊಂದು ಕಡೆ. ಮರ್ಕಮ್ ಸ್ಪಿನ್ ಅನ್ನೂ ತಾನು ಬಾಣವಾಗಿ ಬಳಸಬಲ್ಲೆ ಎಂಬ ಚಾಕಚಕ್ಯತೆ ಇನ್ನೊಂದು ಕಡೆ. ರಬಾಡ, ನೋಕಿಯೆ ಅನುಭವದ ಅನುಪಸ್ಥಿತಿ ತಮ್ಮ ತಂಡವನ್ನು ಕಾಡದಂತೆ ನೋಡಿಕೊಂಡದ್ದು ಬವುಮಾ ಜಾಣ್ಮೆ.

ಕೇಪ್‌ಟೌನ್‌ನ ಹೊರವಲಯದ ಮಧ್ಯಮವರ್ಗದ ಕುಟುಂಬದ ಕುಡಿ ಬವುಮಾ. ಅಪ್ಪ ಪತ್ರಕರ್ತ. ಅಂಕಲ್‌ಗಳೇ ಕ್ರಿಕೆಟ್ ಪ್ರೀತಿಗೆ ನೀರೆರೆದವರು. ಆರನೇ ತರಗತಿಯಲ್ಲಿ ಓದುತ್ತಿದ್ದಾಗ, 'ಹದಿನೈದು ವರ್ಷಗಳ ನಂತರ ಏನಾಗುವಿರಿ?' ಎಂದು ಎಲ್ಲ ವಿದ್ಯಾರ್ಥಿಗಳಿಗೂ ಪ್ರಬಂಧ ಬರೆದುಕೊಂಡು ಬರುವಂತೆ ಶಾಲಾ ಶಿಕ್ಷಕರು ಕೇಳಿದರು. ಬವುಮಾ ಬರೆದ ಪ್ರಬಂಧದಲ್ಲಿ, 'ನಾನು ದಕ್ಷಿಣ ಆಫ್ರಿಕಾ ತಂಡದ ಪರವಾಗಿ ಚೆನ್ನಾಗಿ ಕ್ರಿಕೆಟ್ ಆಡುತ್ತೇನೆ. ಆಗ ಅಧ್ಯಕ್ಷರು ನನ್ನನ್ನು ಅಭಿನಂದಿಸುತ್ತಾರೆ' ಎಂಬ ಸಾಲಿತ್ತು. ಹೇಳಿದಂತೆಯೇ ಬವುಮಾ 2016ರಲ್ಲಿ ದಕ್ಷಿಣ ಆಫ್ರಿಕಾ ಟೆಸ್ಟ್ ತಂಡದಲ್ಲಿ ಶತಕ ಗಳಿಸಿದರು. ಅದುವರೆಗೆ ಯಾವ ಕಪ್ಪು ವರ್ಣದ ಬ್ಯಾಟ್ಸ್‌ಮನ್ ಕೂಡ ಟೆಸ್ಟ್ ಶತಕ ಗಳಿಸಿರಲಿಲ್ಲ.

ಬರೀ 62 ಇಂಚಿನ ವಾಮನಮೂರ್ತಿ ಬವುಮಾ ಆಕರ್ಷಕ ಕ್ರಿಕೆಟರ್ ಅಲ್ಲ. ಆದರೆ, ಸಂಯಮದಲ್ಲಿ ನ್ಯೂಜಿಲೆಂಡ್‌ನ ಕೇನ್ ವಿಲಿಯಮ್ಸನ್ ತಮ್ಮನಂತೆ ಕಾಣುತ್ತಾರೆ. ಡ್ರೆಸಿಂಗ್ ಕೋಣೆಯ ವರ್ಣಭೇದ ಕುಚೇಷ್ಟೆಗಳನ್ನು ಸಹಿಸಿಕೊಂಡೇ, ಎಲ್ಲರೊಳಗೊಂದಾಗಿ ಮೈದಾನದಲ್ಲಿ ಆಟದ ಮೇಲೆ ಗಮನ ಕೇಂದ್ರೀಕರಿಸುವಂತೆ ಮಾಡುವ ಜಾಣತನದಿಂದಾಗಿ ಬವುಮಾ ಗುರುತಾಗಿದ್ದಾರೆ. 31 ವಯಸ್ಸಿನ ಅವರ ಮುಂದಿನ ಪಯಣ ದಕ್ಷಿಣ ಆಫ್ರಿಕಾದ ಶಿಥಿಲ ಕ್ರಿಕೆಟ್ ಗೋಡೆಗಳಿಗೆ ಹೇಗೆ ಕಾಂಕ್ರೀಟ್ ಹಾಕುವುದೋ ನೋಡಬೇಕು.

ಪ್ರತಿಕ್ರಿಯಿಸಿ: feedback@sudha.co.in